**ದಿನಾಂಕಃ 17-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿಪರ: ಶ್ರೀ.ಆರ್.ಹೆಚ್. ವಕೀಲರಿಂದಃ-**

ಸಾಕ್ಷಿಯು ಸದರಿ ತಕರಾರಿನ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದನ್ನು ನಿಪಿ.13 ಎಂದು ಗುರುತಿಸಲಾಯಿತು.

ವಾದಿಯು ನಕಾಶೆಯಂತೆ ಇ-ಖಾತೆಯನ್ನು ಮಾಡಿಕೊಡಿ ಎಂದು ಪಿಡಿಓ ಗ್ರಾಮ ಪಂಚಾಯಿತಿ ಗರ್ಜೆಯವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಸಾಕ್ಷಿಯು ಸದರಿ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.14 ಎಂದು ಗುರುತಿಸಲಾಯಿತು.

2015 ರಲ್ಲಿ ಅಸ್ಸೆಸ್ಮೆಂಟ್ ನಂಬರು 424 ಎ ಆಸ್ತಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮಾಡಿ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ತಿಳಿಸಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯಿಂದ ನಮಗೆ ಪತ್ರ ಬಂದಿರುತ್ತದೆ. ದಿನಾಂಕ 25.05.2012 ರಂದು ಗರ್ಜೆ ಗ್ರಾಮಸ್ಥರು ಗರ್ಜೆ ಗ್ರಾಮ ಪಂಚಾಯಿತಿಗೆ ಅಸ್ಸೆಸ್ಮೆಂಟ್ ನಂ.424 ಎ ಆಸ್ತಿಯಲ್ಲಿರುವ ರಸ್ತೆಯಲ್ಲಿ ಅಕ್ರಮವಾಗಿ ಮನೆಯನ್ನು ಮತ್ತು ನಿವೇಶನವನ್ನು ವಾದಿಯು ವಿಸ್ತರಿಸಿರುತ್ತಾರೆ ಎಂದು ಅರ್ಜಿಯನ್ನು ಗರ್ಜೆ ಗ್ರಾಮ ಪಂಚಾಯಿತಿಗೆ ನೀಡಿರುತ್ತಾರೆ. ವಾದಿಗೆ ದಿನಾಂಕ 11.11.2011 ರಂದು ಗರ್ಜೆ ಗ್ರಾಮ ಪಂಚಾಯಿತಿಯಿಂದ ಪಿ.ಡಿ.ಓ.ರವರು ಮನೆಯನ್ನು ನಿರ್ಮಿಸದಂತೆ ತಿಳುವಳಿಕೆ ನೋಟೀಸನ್ನು ನೀಡಿರುತ್ತಾರೆ. ಸಾಕ್ಷಿಯು ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.15 ಎಂದು ಗುರುತಿಸಲಾಯಿತು.

ದಿನಾಂಕ 03.09.2015 ರಂದು ಅಸ್ಸೆಸ್ಮೆಂಟ್ ನಂ.424 ಎ ಆಸ್ತಿಯ ಪಕ್ಕದಲ್ಲಿರುವ ಹುಲ್ಲು ಹಿತ್ತಲನ್ನು ಅಳತೆ ಮಾಡಿ ಶಂಕರಪ್ಪ ಬಿನ್ ಲಕ್ಷ್ಮಣ ಅಂದರೆ

ಪ್ರತಿವಾದಿಯ ಮಗ ಇವರು ನಮ್ಮ ಹೆಸರಿಗೆ ಉಳಿದ ಜಾಗವನ್ನು ಖಾತೆ ಮಾಡಿ ಅಸ್ಸೆಸ್ಮೆಂಟ್ ಗೆ ನಮಗೆ ಸೇರಿಸಿಕೊಡಿ ಎಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ನಿಡಿ.7 ರ ದಾಖಲೆಯನ್ನು ನೀಡುವಂತೆ ಕೋರಿ ವಾದಿಯು ಮಾಹಿತಿ ಹಕ್ಕಿನಡಿ ಗರ್ಜೆ ಗ್ರಾಮ ಪಂಚಾಯಿತಿ ಪಿ.ಡಿ.ಓ.ರವರಿಗೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ಮೇಲೆ ದಿನಾಂಕ 08.03.2023 ರಂದು ಮೂಲ ದಾಖಲಾತಿ ಲಭ್ಯವಿಲ್ಲ ಎಂದು ವಾದಿಗೆ ಹಿಂಬರಹವನ್ನು ನೀಡಿರುತ್ತಾರೆ ಎಂದು ಸಾಕ್ಷಿಯು ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.16 ಎಂದು ಗುರುತಿಸಲಾಯಿತು.

**(ಪ್ರತಿವಾದಿಗಳ ಪರ ವಕೀಲರುಗಳು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಅನುಮತಿ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.